


. ಸ್ವಾಮೀಜಿ ಕನ್ಯಾಕುಮಾರಿಯಿಂದ ಚೆನ್ನೈಗೆ ಹೋದರು. ಅಲ್ಲಿ ಯುವಕರ ತಂಡವೊಂದಕ್ಕೆ ಸ್ಫೂರ್ತಿ ನೀಡಿದರು. ಒಂದು ದಿನ ....




ಮದರಾಸಿನ ಯುವಕರು ಅತ್ಯಂತ ಉತ್ಸಾಹದಿಂದ ಮನೆಮನೆಗೆ ಹೋಗಿ ಸ್ವಾಮೀಜಿಯವರ ಸಮುದ್ರಯಾನಕ್ಕೆ ಹಣ ಸಂಗ್ರಹಿಸಿದರು.





ಸ್ವಾಮೀಜಿ 31-05-1893ರಂದು ಮುಂಬೈನಿಂದ ಅಮೇರಿಕಾಕ್ಕೆ ಹಡಗಿನಲ್ಲಿ ಹೊರಟರು.





ಚಿಕಾಗೊದಲ್ಲಿ ಸರ್ವಧರ್ಮ ಸಮ್ಮೇಳನ 1893ನೇ ಇಸವಿಯ ಸೆಪ್ಟೆಂಬರ್11ರಂದು ಆರಂಭವಾಯಿತು. ಇತರ ಧರ್ಮಗಳಪ್ರತಿನಿಧಿಗಳು ತಮ್ಮ ಧರ್ಮದ ಶ್ರೇಷ್ಠತೆಯನ್ನು ಪ್ರತಿಪಾದಿಸಿದರು.





ಅಮೆರಿಕಾದ ಸಹೋದರ ಸಹೋದರಿಯರೆ. ಹಿಂದೂ ಧರ್ಮದ ನಾನಾವರ್ಗಗಳ, ಪಂಗಡಗಳ ಲಕ್ಷೋಪಲಕ್ಷ ಜನರ ಪರವಾಗಿ ನಿಮಗೆ ವಂದಿಸುತ್ತೇನೆ.
25
26
ಮಾರನೆಯ ದಿನ ವಿವೇಕಾನಂದರ ಭಾವಚಿತ್ರಗಳು ಚಿಕಾಗೋ ರಸ್ತೆಯ ಮೂಲೆಮೂಲೆಗಳಲ್ಲಿ ಪ್ರದರ್ಶನಗೊಂಡವು. ಪತ್ರಿಕೆಗಳೆಲ್ಲಾ ಅವರ ಭಾಷಣವನ್ನು ಪ್ರಕಟಿಸಿ ಅವರನ್ನು ಹಾಡಿ ಹೊಗಳಿದವು. ಅಮೆರಿಕಾದ ಆರಾಧ್ಯ ದೇವತೆಯಾದರವರು.
ಅವರ ಭಾಷಣವೇ ಶ್ರೇಷ್ಠ
ಚಿಕ್ಕವರಾದರೂ ಅಪಾರ ಪ್ರತಿಭೆ ಮತ್ತು ಜ್ಞಾನ
ಯಾರೀ ಸಂನ್ಯಾಸಿ?
27
ಆಹಾ! ಎಂತಹ ಅದ್ಭುತ ಭಾಷಣ.
ಸಾರ್ವಜನಿಕ ಸ್ಥಳಗಳಲ್ಲಿ, ಮನೆಗಳಲ್ಲಿ — ಎಲ್ಲೆಲ್ಲೂ ಅವರ ಭಾವಚಿತ್ರಗಳು ಕಾಣಿಸಿಕೊಂಡವು.
28
VIVEKANANDA
ಬಹಳ ಕಡೆ ಭಾಷಣ ಮಾಡಲು ಕರೆ ಬಂದಿತು. ಅವರ ಬಳಿ ಬಂದವರೆಲ್ಲಾ ಸ್ಫೂರ್ತಿ ಪಡೆಯುತ್ತಿದ್ದರು. ಅಮೆರಿಕಾದಲ್ಲಿ, ನಂತರ ಇಂಗ್ಲೆಂಡಿನಲ್ಲಿ ಬಹಳ ಜನ ಅವರ ಅನುಯಾಯಿಗಳಾದರು.
29


ವೇದಾಂತಬೋಧನೆಗಾಗಿ ಹಲವು ಕಡೆಗಳಲ್ಲಿ ಸಂಘಗಳನ್ನು ಸ್ಥಾಪಿಸಿದರು.





ಕೊನೆಗೆ ಸ್ವಾಮೀಜಿ ಇಂಗ್ಲೆಂಡಿನಿಂದ ತಾಯ್ನಾಡಿಗೆ ಪ್ರಯಾಣ ಬೆಳೆಸಿದರು. ಅವರನ್ನು ರಾಮೇಶ್ವರದ ರಾಜ ಭಾಸ್ಕರ ಸೇತುಪತಿ, ಪಾಂಬನ್ ಬಂದರಿನಲ್ಲಿ ಸ್ವಾಗತಿಸಿದನು. ಅವರನ್ನು ನೋಡಲು ಸಾವಿರಾರು ಜನ ಸೇರಿದ್ದರು.





ರಾಮೇಶ್ವರಂ,ಪರಮಕುಡಿ,ಮಧುರೈ ಮುಂತಾದ ಊರುಗಳ ಮೂಲಕ ಚೆನ್ನೈಗೆ ಬಂದು ಸೇರಿದರು. ಎಲ್ಲ ಊರುಗಳಲ್ಲಿಯೂ ಸಹಸ್ರಾರು ಜನ ಅವರ ದರ್ಶನ ಪಡೆಯಲು, ಅವರ ಸ್ಫೂರ್ತಿವಾಣಿಯನ್ನು ಕೇಳಲು ಹಾತೊರೆದು ನಿಂತಿದ್ದರು.




ಚೆನ್ನೈನಲ್ಲಿ ಅವರಿಗೆ ವೀರ ಸ್ವಾಗತ ಕಾದಿತ್ತು.



ಚೆನ್ನೈನಲ್ಲಿ ಅವರು ಆರು ಪ್ರಚಂಡ ಭಾಷಣಗಳನ್ನು ಕೊಟ್ಟರು. ಒಂದೊಂದೂ ಚೆನ್ನೈನ ಯುವಕರನ್ನು ಉತ್ತೇಜಿಸಿತು.





ಅಲ್ಲಿಂದ ಕಲ್ಕತ್ತಾಗೆ ಹೋದರು. ಅಲ್ಲಿ ಗಂಗಾನದಿಯ ದಡದಲ್ಲಿ ಸಂನ್ಯಾಸಿಗಳಿಗಾಗಿ ಬೇಲೂರು ಮಠವನ್ನು ಆರಂಭಿಸಿದರು. ಅಲ್ಲಿ ತಮ್ಮ ಗುರುದೇವರಾದ ಶ್ರೀರಾಮಕೃಷ್ಣರನ್ನು ಸ್ಥಾಪಿಸಿದರು. ಆ ಸ್ಥಳವನ್ನು ತ್ಯಾಗ ಮತ್ತು ಸೇವೆಯ ಭಾವನೆಯಿಂದ ಕೂಡಿದ ಸಾವಿರಾರು ಯುವಕರ ತಾಣವನ್ನಾಗಿ ಮಾಡಿದರು.




ದೇಶದ ಹಾಗೂ ಪ್ರಪಂಚದ ಹಲವೆಡೆ ರಾಮಕೃಷ್ಣ ಮಠದ ಶಾಖೆಗಳು ತೆರೆಯಲ್ಪಟ್ಟವು. ಇನ್ನೂ ತೆರೆಯಲ್ಪಡುತ್ತಿವೆ. ಮಾನವ ಸೇವೆಯೇ ದೇವರ ಸೇವೆ ಎನ್ನುವುದೇ ಈ ಮಠದ ಧ್ಯೇಯ. ಮಾನವ ಕುಲಕ್ಕೇ ಶಾಂತಿಯನ್ನು ತಂದುಕೊಟ್ಟ ಆ ಮಹಾನ್ ವೀರ ಸಂನ್ಯಾಸಿ 1902 ರ ಜುಲೈ 4ರಂದು ತಮ್ಮ 39ನೆಯ ವಯಸ್ಸಿನಲ್ಲಿ ದೇಹತ್ಯಾಗ ಮಾಡಿದರು.




ಅವರು ಅಮರಸಂದೇಶವನ್ನು ಬಿಟ್ಟುಹೋಗಿದ್ದಾರೆ.




ವಿವೇಕಾನಂದರ ವಾಣಿ ಇನ್ನೂ ಮೊಳಗುತ್ತಿದೆ. ಭಾರತದ ಯುವಕ ಯುವತಿಯರೇ, ಅವರ ಕರೆಗೆ ಓಗೊಡುವಿರಾ?

